## ಅಬ್ಬರಿಸುತಿದೆ ‘ಗಜಪಡೆ’!

ಆನೆಗಳ ಹಿಂಡು ಕಾಡಿನ ಅಂಚಿನ ಗ್ರಾಮಗಳಲ್ಲಿ ಕಾಣಿಸಿಕೊಳ್ಳುವುದು ಮಾಮೂಲಿ. ಆದರೀಗ, ಗಾಂಧಿನಗರದಲ್ಲಿ ಗಜಪಡೆ ಕಾಣಿಸಿಕೊಂಡಿದೆ. ಇದು ಸಿನಿಮಾ ಆಸಕ್ತರ ಯುವಪಡೆ. ಸೀನು ನಿರ್ದೇಶನದಲ್ಲಿ ಕಳೆದ ವಾರ ಸೆಟ್ಟೇರಿದ ‘ಗಜಪಡೆ’ ಹೊಸ ದಾರಿಯಲ್ಲಿ ನಡೆಯುವ ಉತ್ಸಾಹದಲ್ಲಿದೆ. ‘ಅಬ್ಬರಿಸಿ ಬೊಬ್ಬಿರಿದರಿಲ್ಲಾರಿಗು ಭಯವಿಲ್ಲ’ ಎನ್ನುವ ‘ಬಬ್ರುವಾಹನ’ ಚಿತ್ರದ ಗೀತೆಯ ಸಾಲನ್ನು ಸೀನು ಅವರು ತಮ್ಮ ಸಿನಿಮಾ ಶೀರ್ಷಿಕೆಯ ಅಡಿಟಿಪ್ಪಣಿಯಾಗಿಸಿದ್ದಾರೆ.

‘ಮೊಗ್ಗಿನ ಮನಸು’ ಚಿತ್ರದಲ್ಲಿ ನಟಿಸಿದ್ದ ಹರ್ಷ ‘ಗಜಪಡೆ’ ಚಿತ್ರದ ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅವರೊಂದಿಗೆ ಆನಂದ್ ಹಾಗೂ ಅರುಣ್ ಅವರು ಕೂಡ ಮುಖ್ಯಪಾತ್ರಗಳಲ್ಲಿದ್ದಾರೆ. ಈ ಮೂವರು ತರುಣರ ಭೂಗತಲೋಕದಲ್ಲಿನ ಪಯಣದ ಕಥೆಯನ್ನು ಚಿತ್ರ ಒಳಗೊಂಡಿದೆ. ತಮಗೆ ಅರಿವಿಲ್ಲದಂತೆಯೇ ರೌಡಿಸಂ ಜಗತ್ತನ್ನು ಪ್ರವೇಶಿಸುವ ಯುವಕರು, ಆ ಸುಳಿಯಿಂದ ಹೊರಬರಲು ಪರದಾಡುವ ಕಥೆಯನ್ನು ಸೀನು ರೂಪಿಸಿದ್ದಾರೆ. ವಿಕ್ಟರಿ ವಾಸು ಖಳ ಪಾತ್ರವನ್ನು ಪೋಷಿಸುತ್ತಿದ್ದಾರೆ.

ಈ ರೋಷಾವೇಶದ ಕಥೆಗೆ ತನ್ಮಯಿ ಅವರ ಗ್ಲಾಮರ್ ಬಳಕೆಯಾಗಲಿದೆ. ಮೊನಿಶಾ ತಾರಾಗಣದ ಮುಂಚೂಣಿಯಲ್ಲಿರುವ ಮತ್ತೊಬ್ಬ ಚೆಲುವೆ. ಅಭಿಲಾಶ್ ಮತ್ತು ಜೋಯಿಸ್ ಅವರು ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ. ಅಂದ ಹಾಗೆ, ಸೀನು ಅವರಿಗಿದು ನಿರ್ದೇಶಕರಾಗಿ ಚೊಚ್ಚಿಲ ಸಿನಿಮಾ. ಸಹಾಯಕ ನಿರ್ದೇಶಕರಾಗಿ ಸುಮಾರು ಇಪ್ಪತ್ತು ಚಿತ್ರಗಳಲ್ಲಿ ಕೆಲಸ ಮಾಡಿರುವ ಅವರು, ‘ಗಜಪಡೆ’ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಒಂದೂವರೆ ತಿಂಗಳ ಕಾಲದ ಶೂಟಿಂಗ್ ಶೆಡ್ಯೂಲ್ ಯೋಜಿಸಿರುವ ಅವರು, ‘ಗಜಪಡೆ’ ಮೂಲಕ ಕನ್ನಡ ಚಿತ್ರರಂಗದಲ್ಲಿ ಅಸ್ತಿತ್ವ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ.





## ಶುಭಕಾಲದ ನಿರೀಕ್ಷೆಯಲ್ಲಿ ‘ಚಿರಾಯು’

‘ಒರಟ’ ಖ್ಯಾತಿಯ ಪ್ರಶಾಂತ್ ಅವರ ಮುಖದಲ್ಲಿ ದಣಿವಿತ್ತು, ನಿರಾಳಭಾವವಿತ್ತು, ಸಂತೃಪ್ತಿಯ ಸುಳಿವೂ ಇತ್ತು. ಅದು, ಪ್ರಶಾಂತ್ ಅವರ ‘ಚಿರಾಯು’ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಸಮಾರಂಭ. ‘ಒರಟ’ ಚಿತ್ರಕ್ಕೆ ಸಂಗೀತ ನೀಡಿದ್ದ ಶಂಕರ್ ಅವರು ‘ಚಿರಾಯು’ ಚಿತ್ರಕ್ಕೂ ಸಂಗೀತ ನೀಡಿದ್ದಾರೆ. ಈ ಸಿನಿಮಾದ ಗೀತೆಗಳು ಕೂಡ ಸಹೃದಯರಿಗೆ ಇಷ್ಟವಾಗಲಿವೆ ಎನ್ನುವ ನಂಬಿಕೆ ಅವರದು.

‘ಚಿರಾಯು’ ಚಿತ್ರದಲ್ಲಿ ಪ್ರಶಾಂತ್ ಅವರದ್ದು ಆಲ್‌ರೌಂಡರ್ ಪ್ರದರ್ಶನ. ನಾಯಕನಾಗಿ ನಟಿಸುವುದರ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಅವರು ನಿರ್ವಹಿಸಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆಯೂ ಅವರದ್ದೇ. ಇಷ್ಟೆಲ್ಲ ಆದಮೇಲೆ ನಿರ್ಮಾಪಕರು ಕೂಡ ಅವರೇ ಎನ್ನುವುದು ಯಾರಿಗಾದರೂ ಸ್ಪಷ್ಟವಾದೀತು. ಸಿನಿಮಾ ನಿರ್ದೇಶನಕ್ಕೆ ಇಳಿಯುವ ಮೊದಲು ಪ್ರಶಾಂತ್ ಜೋರು ಸಿದ್ಧತೆಯನ್ನೇ ನಡೆಸಿದ್ದರಂತೆ. ಸುಮಾರು 2000 ಜನರಿಗೆ ತಮ್ಮ ಚಿತ್ರಕಥೆಯನ್ನು ಹೇಳಿ, ಅವರ ಅನಿಸಿಕೆಗಳನ್ನು ಪಡೆದರಂತೆ. ಈ ಕಥನ ಸಮೀಕ್ಷೆ ತಮ್ಮ ಸಿನಿಮಾದ ಬಗ್ಗೆ ಅವರಿಗೆ ಆತ್ಮವಿಶ್ವಾಸ ತುಂಬಿದೆ. ‘ತನ್ನ ಪ್ರಯತ್ನ ಪ್ರಾಮಾಣಿಕವಾಗಿದೆ, ಗೆಲುವು ದಕ್ಕಲಿದೆ’ ಎನ್ನುವುದು ಅವರ ನಂಬಿಕೆ.

ಶುಭಾ ಪೂಂಜ ‘ಚಿರಾಯು’ವಿಗೆ ನಾಯಕಿ. ಚಿತ್ರದ ಕಥೆ ಹಾಗೂ ಹಾಡುಗಳು ಶುಭಾ ಅವರಿಗೆ ಇಷ್ಟವಾಗಿವೆ. ‘ಚಿರಾಯು’ ಬಿಡುಗಡೆಯ ದಿನವನ್ನು ಅವರು ಕಾಯುತ್ತಿದ್ದಾರೆ. ಈ ಸಿನಿಮಾದ ಮೂಲಕ ಇಡೀ ಚಿತ್ರತಂಡಕ್ಕೆ ಶುಭಕಾಲ ಬರಲಿದೆ ಎನ್ನುವುದು ಅವರ ನಿರೀಕ್ಷೆ.

■ ರಘು